S.C10023/2018
PW-14

**ಈ ದಿನ ದಿನಾಂಕಃ 04.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಠಾಣೆಯಿಂದ ಘಟನಾ ಸ್ಥಳಕ್ಕೆ 8 ಕೀ ಮೀ ದೂರ ಆಗುತ್ತದೆ. ಅಮೃತಹಳ್ಳಿ ಠಾಣೆಯಿಂದ ವಿಷಯ ಬಂದ ನಂತರ ಆಸ್ಪತ್ರೆಯಿಂದ ನನಗೆ ಮಾಹಿತಿ ಬಂದಾಗ ಘಟನೆ ಬಗ್ಗೆ ವಿಷಯ ತಿಳಿಯಿತು. ಸದರಿ ವಿಷಯ ಠಾಣಾ ಡೈರಿಯಲ್ಲಿ ನಮೂದು ಮಾಡಿದ್ದೇನೆ.

ಚಾಸ-2 ರವರ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಮಾಡಿಕೊಂಡಿದ್ದು, ವೈದ್ಯರ ಸಹಿಯನ್ನು ಪಡೆದುಕೊಂಡಿಲ್ಲ, ಅದೇ ರೀತಿ ಚಾಸ-2 ಹೇಳಿಕೆ ಕೊಡುವ ಸ್ಥಿತಿಯಲ್ಲಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸಿಬ್ಬಂದಿಯವರಿಗೆ ಆರೋಪಿತರಿಗೆ ಹಿಡಿಯಲು ಲಿಖಿತ ಜ್ಞಾಪನ ಕೊಟ್ಟಿದ್ದೇನೆ. ಅವರುಗಳ ಚಹರೆ ಹಾಗೂ ಇತರೆ ವಿವರಣೆಗಳನ್ನು ಕೊಟ್ಟಿರಲಿಲ್ಲ. ಸದರಿ ದಿನದಂದು ಯಾವುದೇ ಘಟನೆ ನಡೆಯದೇ ಇದ್ದರೂ ಠಾಣಾ ಅಂಕಿಅಂಶಗಳಿಗೋಸ್ಕರ ಸುಳ್ಳು ದೂರನ್ನು ನೊಂದಾಯಿಸಲಾಗಿದೆ ಎಂದರೆ ಸರಿಯಲ್ಲ. ಮೇಲೆ ತಿಳಿಸಿದಂತೆ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ, ಠಾಣೆಯಲ್ಲಿಯೇ ಕುಳಿತು ಈ ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮೇಲೆ ತಿಳಿಸಿದ ಸಾಕ್ಷಿದಾರರ ಹೇಳಿಕೆಗಳು ಮತ್ತು ಮರು ಹೇಳಿಕೆಗಳನ್ನು ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಹಾಗೂ ಮು ಮಾ ಗಳನ್ನು ಕೇಸಿಗಾಗಿ ಸೃಷ್ಟನೇ ಮಾಡಿಕೊಂಡು ಹಾಜರುಪಡಿಸಿದ್ದು, ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯದಾರ ಕಂಡುಬರದೇ ಇದ್ದರೂ ಸುಳ್ಳು ದೋಷರೊಪಣೆಪಟ್ಟಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ